# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು

## ಸಿ ಸಿ ನಂಃ**60/2018**

## ಚಾಸಾ-**12**/ಪ್ರಾಸಾ-**17**

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.** ದಿನಾಂಕಃ**28.02.2026**

| | | |
|---|---|---|
| ಹೆಸರು | : | ಸಿದ್ದಲಿಂಗಪ್ಪ ತಂದೆ ರುದ್ರಪ್ಪ |
| ವಯಸ್ಸು | : | **69** ವರ್ಷ |
| ಉದ್ಯೋಗ | : | ವ್ಯವಸಾಯ |
| ವಿಳಾಸ | : | ತುಪ್ಪದಹಳ್ಳಿ ಗ್ರಾಮ, ಜಗಳೂರು |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ಚಾಸಾ-1 ಮತ್ತು 13 ಅವರು ನನ್ನ ತಮ್ಮಂದಿರು ಇರುತ್ತಾರೆ . ಆರೋಪಿಗಳು ತುಪ್ಪದಹಳ್ಳಿ ಗ್ರಾಮದವರು ಇರುತ್ತಾರೆ . ಈ ಸುಮಾರು 9 ವರ್ಷದ ಹಿಂದೆ ಚಾಸಾ-1 ರವರಿಗೆ ಸಂಬಂದಿಸಿದಿ ಅಡಿಕೆ ಕಳ್ಳತನ ಆಗಿರುತ್ತದೆ . ಚಾಸಾ-1 ರವರಿಗೆ ಸಂಬಂದಿಸಿದ 50 ಕೆ ಜಿ ಗಳ ಒಟ್ಟು 42 ಚೀಲಗಳು ಇರುತ್ತವೆ . ಅವುಗಳಲ್ಲಿ 12 ಅಡಿಕೆ ಚೀಲಗಳು ಕಳ್ಳತನ ಆಗಿರುತ್ತದೆ . ಕಳ್ಳತನ ಆದ ಸಮಯಕ್ಕೆ ಚಾಸಾ-1 ಮತ್ತು ನಾವು ಊರಿನಲ್ಲಿ ಇರಲಿಲ್ಲ . ಕಳ್ಳತನವಾದ ಮರುದಿನ ಚಾಸಾ-1 ರವರು ಪೋಲೀಸರಿಗೆ ದೂರನ್ನು ದಾಖಲಿಸಿರುತ್ತಾರೆ . ನಂತರ ಪೋಲಿಸರು ಕೆಳದು ಹೋದ ಅಡಿಕೆ ಚೀಲಗಳನ್ನು ಪತ್ತೆ ಮಾಡಿದ ಬಗ್ಗೆ ತಿಳಿಯುತ್ತದೆ . ನನಗೆ ಯಾರು ಕಳ್ಳತನ ಮಾಡಿರುವ ಬಗ್ಗೆ ಗೋತ್ತಿರುವುದಿಲ್ಲ .

**(**ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸದರಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಸೂಕ್ತ ಕಾರಣಗಳನ್ನು ನೀಡಿದ ಮೇರೆಗೆ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು**).**

**ಪಾಟೀ ಸವಾಲುಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**-**

ದಿಃ **21.06.2017** ರಂದು ಸಂಜೆ **6.00** ಗಂಟೆ ಸುಮಾರಿಗೆ ಚಾಸಾ**-1** ರವರು ತಮ್ಮ ಮನೆಯಲ್ಲಿ ಅಡಿಕೆ ಚೀಲಗಳನ್ನು ಇಟ್ಟು ಬೀಗ ಹಾಕಿಕೊಂಡು ಹೋಗಿರುತ್ತಾರೆ ಎಂದರೆ ಸರಿ. ನಂತರ ದಿಃ **25.06.2017**

ರಂದು ಬೆಳಿಗ್ಗೆ **11.00** ಗಂಟ ಸಮಯಕ್ಕೆ ಚಾಸಾ-**1** ರವರು ಬಂದು ನೋಡಿದಾಗ **,** ತಮ್ಮ ಅಡಿಕೆ ಚೀಲಗಳು ಕಳ್ಳತನವಾದ ವಿಚಾರ ತಿಳಿಯುತ್ತದೆ ಎಂದರೆ ನನಗೆ ಗೋತ್ತಿಲ್ಲ **.** ನಂತರ ಚಾಸಾ-**1** ರವರ ಕಡೆಯಿಂದ ನನಗೆ ಅವರಿಗೆ ಸಂಬಂದಿಸಿದ **12** ಅಡಿಕೆ ಚೀಲಗಳು ಕಳ್ಳತನ ವಾಗಿರುತ್ತದೆ ಎಂದು ತಿಳಿಯುತ್ತದೆ ಎಂದರೆ ಸರಿ. ಈ ಬಗ್ಗೆ ಪೋಲಿಸರಿಗೆ ದೂರು ನೀಡಿರುತ್ತಾರೆ ಎಂದರೆ ಸರಿ. ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿರುವುದಿಲ್ಲ . ಈಗ ಸಾಕ್ಷಿಗೆ ತಾನು ಪೊಲೀಸರಿಗೆ ನೀಡಿದ್ದ ದಿಃ **27.06.2018** ರ ಹೇಳಿಕೆಯನ್ನು ಓದಿ ತಿಳಿಸಿದ್ದು **,** ಸಾಕ್ಷಿ ನಿರಾಕರಿಸಿಸುತ್ತಾರೆ **.** ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ **20** ಎಂದು ಗುರುತಿಸಲಾಯಿತು. ನಂತರ ಪೋಲಿಸರು ಅಡಿಕೆ ಚೀಲ ಮತ್ತು ಅಡಿಕೆ ಕಳ್ಳತನ ಮಾಡಿದ ಆರೋಪಿಗಳನ್ನುಪತ್ತೆ ಮಾಡಿರುತ್ತಾರೆ ಎಂದರೆ ನನಗೆಗೋತ್ತಿಲ್ಲ **.** ನಂತರ ನಾನು ಚಾಸಾ-**1** ಮತ್ತು **13** ರವರು ಪೋಲೀಸ್ ಠಾಣೆಗೆ ಹೋಗಿ ನೋಡಿದಾಗ **12** ಚೀಲಗಳು ಅದರಲ್ಲಿ ತೂಕಮಾಡಿ ನೊಡಲಾಗಿ **567** ಕೆ ಜಿ ತೂಕ ಇದ್ದ ಬಗ್ಗೆ ತಿಳಿಯುತ್ತದೆ **,** ಹಾಗು ಕಳ್ಳತನ ಮಾಡಿದ ಆಸಾಮಿಗಳ ಬಗ್ಗೆ ತಿಳಿಯಲಾಗಿ ಅವರು ಹೆಸರು ಗೋಪಾಲಪ್ಪ ಮತ್ತು ಬಸವರಾಜಪ್ಪ ಆರೋಪಿಗಳು ಇರುತ್ತದೆ ಎಂದು ತಿಳಿಯುತ್ತದೆ **.** ಆರೋಪಿಗಳು ಸದರಿ ಅಡಿಕೆ ಚೀಲಗಳನ್ನು ಮಾರಾಟ ಮಾಡಲು ಪಹಣಿ ಇಲ್ಲದ ಕಾರಣ ಚಾಸಾ-**10** ರವರ ಮನೆಯಲ್ಲಿ ಸಂಗ್ರಹಿಸಿ ಇಟ್ಟಿರುತ್ತಾರೆ ಎಂದರೆ ನನಗೆ ಗೋತ್ತಿಲ್ಲ **.** ಚಾಸಾ-**10** ರವರ ಮನೆಯಲ್ಲಿ ಪೋಲಿಸರು ಕಳ್ಳತನ ಮಾಡಿದ ಅಡಿಕೆ ಚೀಲಗಳನ್ನು ವಶಕ್ಕೆ ಪಡೆದುಕೊಳ್ಳುತ್ತಾರೆ ಎಂದರೆ ನನಗೆ ಗೋತ್ತಿಲ್ಲ **.** ಆರೋಪಿಗಳ ಬಗ್ಗೆ ನಾನು ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ತಾನು ಪೊಲೀಸರಿಗೆ ನೀಡಿದ **07.07.2018** ಹೇಳಿಕೆಯನ್ನು ಓದಿ ತಿಳಿಸಿದ್ದು **,** ಸಾಕ್ಷಿ ನಿರಾಕರಿಸಿಸುತ್ತಾರೆ **.** ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ **21** ಎಂದು ಗುರುತಿಸಲಾಯಿತು. ಆರೋಪಿಗಳು ನಮ್ಮ ಊರಿನವರು ಆದ ಕಾರಣ ಅವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ-ಆರೋಪಿ ಪರ H.H., ವಕೀಲರಿಂದಃ</u>**

ನಾನು ದಾವಣಗೆರೆಯಲ್ಲಿ ವಾಸವಿರುತ್ತೇನೆ ಸಾಕ್ಷಿ ದಾವಣೆಗೆರ ಮತ್ತು ತುಪ್ಪದಹಳ್ಳಿ ಎರಡು ಕಡೆ ವಾಸವಿರುತ್ತೇನೆ . ನನಗೆ ಕಳ್ಳತನವಾದ ಬಗ್ಗೆ ಮಾಹಿತಿ ಇರುವುದಿಲ್ಲ . ನನಗೆ ಚಾಸಾ-1 ರವರಿಂದ ಕಳ್ಳತನವಾದ ವಿಚಾರ ತಿಳಿಯುತ್ತದೆ ಎಂದರೆ ಸರಿ. ನನಗೆ ಅಡಿಕೆ ಎಷ್ಟು ತೂಕ , ಎಷ್ಟು ಚೀಲ ಎಂಬ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಚಾಸಾ-1 ರವರು ಇಟ್ಟಿದ್ದ ಅಡಿಕೆಯು ಬೇಯಿಸಿದ ಅಥವಾ ಹಸಿ ಅಡಿಕೆಯ ಗೋತ್ತಿರುವುದಿಲ್ಲ ಎಂದರೆ ಸಾಕ್ಷಿ ಚಾಸಾ-1 ರವರು ಬೇಯಿಸಿದ ಅಡಿಕೆಯನ್ನು ಚೀಲದಲ್ಲಿ ತುಂಬಿ ಇಟ್ಟಿರುತ್ತಾರೆ ಎಂದು ಹೇಳುತ್ತಾರೆ . ನಾನು ಈ ಬಗ್ಗೆ ಪೋಲಿಸರಿಗೆ ಎಂದಿಗೂ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿ. ನಾನು ಈ ಪ್ರಕರಣದ ಆರೋಪಿಗಳನ್ನು ಎಂದಿಗೂ ನೋಡಿರುವುದಿಲ್ಲ ಎಂದರೆ ಸರಿ.

**<u>ಮರು ವಿಚಾರಣೆಃ</u> ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ.)

**ಓ ಹೇ ಕೇ ಸರಿ ಇದೆ**

**Sd/-**

**ಪ್ರ.ದ.ನ್ಯಾ.ದಂ., ಜಗಳೂರು**